57

ಮೈಸೂರ ಗೆಜೆಟ್.

ನಂ. XXXI.] ಸರ್ಕಾರದಿಂದ ಪ್ರಾಯಿಷ್‌ಆಜ್ಞೆ. [ನಂ. 4

ಬೆಂಗಳೂರು, ಗುರುವಾರ, ಜನವರಿ ತಾ॥ 30, ಸ್ಯ 1896.

II ನೇ ಭಾಗ.

ಇಂಡ್ಯಗವರ್ನ್‌ಮೆಂಟ್, ರೆಸಿಡೆಂಟರು, ಚೀಫ್ ಜಡ್ಜ್‌ರು ವಗೈರೆಯವರಿಂದ ಕೊಡೋಣಾದ ಇಸ್ತಿಹಾರ್ ನಾಮೆಗಳು.

ಫಾರೆಸ್ಟ್ ಇಲಾಖೆ.

ನೋಟಸ್.

ತಾರೀಖು 29ನೇ ಅಗಸ್ಟ್ 1894.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಕೆಳಗೆ ನಮೂದಿಸಿರುವ 12 ಕಬ್ಬಿಣದ ಆಲೆಗಳು ಬೆಂಗಳೂರು ಕೋಟೆಯಲ್ಲಿ ಹಳೇಸುಲ್ತಾನ್ ಮಹಲಿನಲ್ಲಿರುವ ಫಾರೆಸ್ಟ್ ಇಲಾಖಾ ಇನ್‌ಸ್ಪೆಕ್ಟರ್ ಜನರಲ್ ಸಾಹೆಬರವರ ಆಫಿಸಿನಲ್ಲಿ ಖರೀದಿಗೆ ದೊರಿಯುತ್ತೆ.

ನಂಬರ್.	ತಯಾರ್ ಮಾಡಿದ ಕಾರ್ಖಾನೆ ಹೆಸರು.	ಅಸಲ್ ಖರೀದಿ (ರೂಪಾಯಿ.)
7	ಬೆಂಗಳೂರು ರಿಕ್ಕಿಯವರ ಕಾರ್ಖಾನೆ	ವಂದಕ್ಕೆ 150
2	ಇರ್ಗ್ಲಾಡ್ ಪೋರ್ಟರು ಬ್ರದರಸ್‌ರ ಡಿಟೋ	,, 170
1	ಮದ್ರಾಸ್ ಓಕ್ಸ್‌ರವರ ಡಿಟೋ	,, 250
1	ಡಿಟೋ ಡಿಟೋ ಡಿಟೋ	,, 188
1	ಡಿಟೋ ಬೋರ್ಯಾಮ್‌ರವರ ಡಿಟೋ	,, 85

ಖರೀದೀದಾರ್ರು ವ್ಯವಸಾಯ ಮಾಡುವವರಾಗಿದ್ದಲ್ಲಿ ಅಸಲ್ ಖರೀದಿಯಲ್ಲಿ ಕೇಕಡಾ 12½ ರೂಪಾಯಿ ಸೋಡಿಯಿಂದ ವಿಕ್ರಯಿಸಲ್ಪಡುವದು.

ಯಲ್. ರಿಕ್ಕೆಟ್ಸ್,
ಇನ್‌ಸ್ಪೆಕ್ಟರ್ ಜನರಲ್ ಆಫ್ ಫಾರೆಸ್ಟ್ಸ್.